Petition from dependents of Sri Mahadevaswamy

SRI H. GANGADHARAN (Krishnaraja).— I beg to present a petition signed from the dependents of the Sri Mahadevaswamy ex-M.L.C., regarding waiving of loans advanced to Kannada theaters limited.

MR. SHEAKER.—The petition is presented.

CALLING ATTENTION TO MATTER OF URGENT PUBLIC IMPORTANCE

(i) re : Distribution of wheat to mills instead of distributing to public

SRI T. R. SHAMANNA (Basavanagudi).—I call the attention of the Minister for Food and Forest to the distribution of wheat to the Mills instead of distributing to the public.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).— ಈ ಗಮನ ಸೆಳೆಯುವ ಸೂಚನೆಗೆ ನನ್ನ ಹೇಳಿಕೆ ಈ ರೀತಿ ಇದೆ.

ಮಾನ್ಯ ಸದಸ್ಯರು ಒನೇ ನಿಯಮದ ಪ್ರಕಾರ ಗಮನ ಸೆಳೆಯುವ ಸೂಚನೆಯನ್ನು ನೀಡಿ ಕರ್ನಾಟಕ ರಾಜ್ಯದ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಸಾರ್ವಜನಿಕರಿಗೆಂದು ಮಾಸಲಾಗಿ ಇಟ್ಟಿದ್ದ ಗೋಧಿಯನ್ನು ರೋಲರ್ ಫ್ಲೋರ್ ಮಿಲ್ಲುಗಳಿಗೆ ಮಾರಿ ಲಾಭ ಗಳಿಸಿದೆಯೆಂದು ತಿಳಿಸಿದ್ದಾರೆ.

ಮೇಲ್ಕಾಣಿಸಿದ ನಿಗಮ ಸಾರ್ವಜನಿಕರಲ್ಲಿ ವಿತರಣೆ ಮಾಡಬೇಕಾಗಿದ್ದ ಗೋಧಿಯನ್ನು ರೋಲರ್ ಮಿಲ್ಲುಗಳಿಗೆ ಬಿಡುಗಡೆ ಮಾಡಿದ್ದು ನಿಜವಾಗಿದೆ. ಈ ಪ್ರಕರಣದ ನಿಜಾಂಶಗಳು ಇಲ್ಲಿ ವಿವರಿಸಲ್ಪಟ್ಟಿದೆ.

ಭಾರತ ಸರ್ಕಾರ ಏಪ್ರಿಲ್ ೧೯೭೫ರಲ್ಲಿ ಘೋಷಿಸಿದ ಗೋಧಿ ವ್ಯಾಪಾರದ ನೀತಿಗೆ ಅನುಗುಣವಾಗಿ ಕರ್ನಾಟಕ ರಾಜ್ಯದಲ್ಲಿನ ಬೇಡಿಕೆಗಳನ್ನು ಪೂರೈಸಲು ಗೋಧಿ ಬೆಳೆಯುವ ರಾಜ್ಯಗಳಿಂದ ಗೋಧಿಯನ್ನು ಕೊಳ್ಳಲು ನಿರ್ಧರಿಸಿತು. ಆ ಪ್ರಕಾರ ಬೆಳೆಯುವ ರಾಜ್ಯಗಳಿಗೆ ಸಲ್ಲಿಸಬೇಕಾದ ಲೆವಿಯನ್ನು ಕೊಟ್ಟು ೨೮,೭೯೭ ಟನ್ನುಗಳಷ್ಟು ಗೋಧಿಯನ್ನು ಖರೀದಿ ಮಾಡಲಾಯಿತು. ಗೋಧಿಯನ್ನು ರಾಜ್ಯಕ್ಕೆ ಸಾಗಿಸಲು ಪರ್ಮಿಟ್ಟುಗಳನ್ನು ಕೇಳಿದಾಗ ಅನೇಕ ಗೋಧಿ ಬೆಳೆಯುವ ರಾಜ್ಯಗಳು ಪ್ರವಾಹ ಪೀಡಿತವಾಗಿದ್ದರಿಂದ ಗೋಧಿಯನ್ನು ಹೊರಗೆ ಸಾಗಿಸಲು ಒಪ್ಪಲಿಲ್ಲ. ಬಹಳ ಕಷ್ಟದಿಂದ ಪಂಜಾಬು ಸರ್ಕಾರದ ಮನವೊಲಿಸಿ ೨೧,೧೩೪ ಟನ್ನು ಗೋಧಿಯನ್ನು ರಾಜ್ಯಕ್ಕೆ ತರಲಾಯಿತು. ಈ ಗೋಧಿಯನ್ನು ಸಾರ್ವಜನಿಕರಿಗೆ ಮತ್ತು ರೋಲರ್ ಮಿಲ್ಲುಗಳಿಗೆ ಲಾಭ ನಷ್ಟ ರಹಿತ ಆಧಾರ ಬಿಡುಗಡೆ ಮಾಡಲಾಯಿತು ರಾಜ್ಯದಲ್ಲಿ ಸಾಕಷ್ಟು ಬೇಡಿಕೆಯು ಇರದಿದ್ದರಿಂದ ಈ ಪೂರ್ಣ ಪ್ರಮಾಣದ ಮಾರಾಟವಾಗಲಿಲ್ಲ. ೭೫–೭೬ನೇ ಸಾಲಿನ ಸಂಗ್ರಹಿತ ಗೋಧಿಯು. ಬೆಳೆಯಾಗಿ ಗೋಧಿಗೆ ಏನೂ ಬೇಡಿಕೆ ಉಳಿಯಲಿಲ್ಲ. ರಾಜ್ಯದ ಆಹಾರ ನಗದು ಈ ಕಾರಣವಾಗಿ ೨,೭೩೦ ಟನ್ನು ಗೋಧಿಯನ್ನು ಬಡ್ಡಿ ಮತ್ತು ಸಂಗ್ರಹಣೆ ವೆಚ್ಚವನ್ನು ಖರ್ಚುಮಾಡಿ ಇಟ್ಟುಕೊಳ್ಳಬೇಕಾಯಿತು,

ಈ ಮಧ್ಯೆ ರಾಜ್ಯದ ಆಹಾರ ನಿಗಮ ಪಂಕ್ತಿ ಪೇಟೆಯಲ್ಲಿ ಕೊಂಡ ರಾಗಿಯನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಬೇಕಾಯಿತು. ಈ ರಾಗಿಯನ್ನು ಕ್ವಿಂಟಾಲಿಗೆ ೧೬೫ ರೂಗಳಿಂದ ೧೭೦ ರೂಪಾಯಿಗಳಷ್ಟು ಹೆಚ್ಚಿನ ಬೆಲೆ ಕೊಟ್ಟು ಕೊಂಡಿದ್ದರೂ ಸಾರ್ವಜನಿಕ ಹಿತದೃಷ್ಟಿಯಿಂದ ೧೧೫ ರೂಪಾಯಿಗಳಿಗೆ ಬಿಡುಗಡೆ ಮಾಡಬೇಕಯಿತು. ಈ ರಾಗಿಯನ್ನು ಸಾರ್ವಜನಿಕರಿಗೆ ನ್ಯಾಯವಾದ ಮತ್ತು ಪೇಟೆಗಿಂತ ಕಡಿಮೇ ಬೆಲೆ ಪ್ರಕಾರ ಬಿಡುಗಡೆ ಮಾಡುವಾಗ ಕರ್ನಾಟಕ ರಾಜ್ಯದ ಆಹಾರ ನಿಗಮವು ರೇಷನ್ ಕಾರ್ಡ್ ಮೇಲೆ ಮಾತ್ರ ವಿತರಣೆ ಮಾಡಿದರು. ಈ ವ್ಯವಹಾರದಲ್ಲಿ ನಿಗಮ ಹೆಚ್ಚಿನ ನಷ್ಟವನ್ನು ಅನುಭವಿಸಬೇಕಾಗಿ ಬಂತು.